



# ಹೆಣ್ಣು..ನವಿಲೇ ತಾನೆಂದಳು..!

**ನವಿಲು ಸೌಂದರ್ಯದ ಖನಿ. ತನ್ನ ಗರಿಗಳನ್ನು ಅಗಲಿಸಿ ನೃತ್ಯ ಮಾಡಲು ಪ್ರಾರಂಭಿಸಿತೆಂದರೆ ಅದರ ಅಂದಕ್ಕೆ ಮಾರುಹೋಗದವರಿಲ್ಲ. ನವಿಲಿನ ಸೌಂದರ್ಯದ್ದೇ ಕಲ್ಪನೆಯಲ್ಲಿ ವಸ್ತ್ರ ವಿನ್ಯಾಸಕಾರರೂ ಸಹ ತಮ್ಮ ಸೀರೆಯ ವಿನ್ಯಾಸಗಳಲ್ಲಿ ನವಿಲಿನ ಗರಿ ಹಾಗೂ ನಾಟ್ಯಶೈಲಿಗಳನ್ನೊಳಗೊಂಡ ವಿಭಿನ್ನ ಭಂಗಿಗಳನ್ನು ವಿನ್ಯಾಸಗೊಳಿಸಿದ್ದಾರೆ.**

**■ ಪ.ನಾ.ಹಳ್ಳಿ ಹರೀಶ್‌ಕುಮಾರ್**

ಎಷ್ಟೇ ಫ್ಯಾಷನೆಬಲ್ ಉಡುಪುಗಳು ಬರಲಿ, ನೀರೆ ಸೀರೆಯಲ್ಲಿ ಚೆಲುವೆಯಾಗಿ ಕಂಗೊಳಿಸುವಷ್ಟು ಬೇರೆ ಯಾವ ಉಡುಪಿನಲ್ಲೂ ಆಕರ್ಷಕವಾಗಿ ಕಾಣಲು ಸಾಧ್ಯವಿಲ್ಲ. ಇದಕ್ಕೆ ತಕ್ಕಂತೆ ಕಣ್ಣಿಗೆ ಒಪ್ಪುವಂಥ ಬಣ್ಣ, ವಿನ್ಯಾಸಗಳಲ್ಲಿ ಮಾರುಕಟ್ಟೆಗೆ ಲಗ್ಗೆ ಇಡುವ ಸೀರೆಗಳು ಫ್ಯಾಷನ್ ಜಗತ್ತಿನಲ್ಲಿ ಭದ್ರವಾದ ಸ್ಥಾನವನ್ನು ಅನಾದಿ ಕಾಲದಿಂದಲೂ ಉಳಿಸಿಕೊಂಡಿದೆ.

ಹಾಗಾಗಿ ಇಂದು ಸೀರೆ ಬರೀ ಕೌಟುಂಬಿಕ ಸಮಾರಂಭಗಳು ಹಾಗೂ ಧಾರ್ಮಿಕ ಸಭೆಗಳಿಗಷ್ಟೇ ಸೀಮಿತವಾಗಿಲ್ಲ. ಫ್ಯಾಷನ್ ಬಯಸುವ ಮಹಿಳೆಯರ ದೈನಂದಿನ ಉಡುಪಾಗಿಯೂ ಮೆರೆಯುತ್ತಿದೆ. ಸೀರೆಯುಟ್ಟು ಅಲಂಕರಿಸಿಕೊಳ್ಳುವುದು ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕ.

ಆದರೆ ಕೆಲವು ಮಹಿಳೆಯರಿಗೆ ಸೀರೆ ಅಪಥ್ಯವಾಗಿದೆ. ಹೀಗಾಗಿ ಅಪರೂಪಕ್ಕೊಮ್ಮೆ ಸೀರೆ ಉಡುವುದನ್ನು ರೂಢಿಸಿಕೊಂಡವರೂ ಇದ್ದಾರೆ.